ನಿಮ್ಮ ಬಿಲ್‌ನ ಪರಿಸ್ಥಿತಿ ಏನಾಗುತ್ತದೆಂದು ನಾಳೆ ನಿಮಗೇ ಗೊತ್ತಾಗುತ್ತದೆ. ಅದು ಎಷ್ಟು ಡೈಲ್ಯೂಟ ಆಗಿದೆ ಎಂದು ಗೊತ್ತಾಗಿದೆ. ದಯವಿಟ್ಟು ತಾವು ಯೋಚನೆ ಮಾಡಿ. ನಾವೇನೂ ಶಾಶ್ವತ ಅಲ್ಲ. ನಾವು ಹಲವು ವರ್ಷ ಅಧಿಕಾರದಲ್ಲಿ ಇದ್ದೆವು. ನೀವು 5 ವರ್ಷ ಇರಿ. ಈಗಲೇ ತರದಿದ್ದರೆ ಏನೂ ಮುಳುಗೋಲ್ಲ. ಇನ್ನೊಂದು ಸಾರಿ ತಾವು ಯೋಚನೆ ಮಾಡಿ. ಇಲ್ಲಿಗೇ ಮುಗಿದುಹೋಗೋಲ್ಲ. ಇಂತಹದ್ದನ್ನು ತಂದು ಕೆಟ್ಟ ಹೆಸರನ್ನು ಏಕೆ ತೆಗೆದುಕೊಳ್ಳುತ್ತೀರಿ ? ತಾವು ಅನುಭವಸ್ಥರಿದ್ದೀರಿ. ಬೇಡ ಎಂದರೂ ತಾವು ಮೆಜಾರಿಟಿ ಇದೆ ಎಂದು ಪಾಸ್ ಮಾಡಿಕೊಳ್ಳಬಹುದು. ನೀವು ಅನುಭವಿಸಿ. ನಿಮ್ಮ ಹಣೇಬರಹ ಹಾಗಿದ್ರೆ ನಾವು ಏನು ಮಾಡುವುದಕ್ಕಾಗುತ್ತದೆ ? ಅನುಭವಿಸಿ.

ಉಪಾಧ್ಯಕ್ಷರು :– ಪರ್ಯಾಲೋಚನಾ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ :– ಸರ್ಕಾರದವರು ಉತ್ತರವನ್ನೇ ಕೊಡಲಿಲ್ಲ.

ಉಪಾಧ್ಯಕ್ಷರು :– ಉತ್ತರ ಕೊಟ್ಟರು.

ಶ್ರೀ ಪಿ. ಜಿ. ಆರ್. ಸಿಂಧ್ಯ :– ಮಾಡುತ್ತಾರೋ ಇಲ್ಲವೋ ಎಂದು ಹೇಳಲಿಲ್ಲ. ಇದನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ವಿರೋಧ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು :– ಪ್ರಸ್ತಾವ ಏನೆಂದರೆ : "1990 ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯತ್, ಮಂಡಲ ಪಂಚಾಯತಿಗಳ ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕವನ್ನು ನಿಯಮ 108 ರ ಮೇರೆಗೆ ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ಮತ್ತು 3 :

ಉಪಾಧ್ಯಕ್ಷರು :– "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ಮತ್ತು 3 ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ 1 ಇತ್ಯಾದಿ :

ಉಪಾಧ್ಯಕ್ಷರು :– ಪ್ರಸ್ತಾವ ಏನೆಂದರೆ : "ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವನ್ನು ಅಂಗೀಕರಿಸಲಾಯಿತು.

(ಮೊದಲನೇ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವನೆ ಅಂಗೀಕಾರ.

ಶ್ರೀ ಬಿ. ಬಸವಲಿಂಗಪ್ಪ :– 1990 ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯತ್, ಮಂಡಲ ಪಂಚಾಯಿತಿಗಳ ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕವನ್ನು ನಿಯಮ 108 ರ ಮೇರೆಗೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು :– ಪ್ರಸ್ತಾವ ಏನೆಂದರೆ "1990 ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯತ್, ಮಂಡಲ ಪಂಚಾಯಿತಿಗಳ ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕವನ್ನು ನಿಯಮ 108 ರ ಮೇರೆಗೆ ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಉಪಾಧ್ಯಕ್ಷರು :– ಈಗ ಸದನವು ಮೇಲೆದ್ದು ಮತ್ತೆ ನಾಳೆ ಬೆಳಿಗ್ಗೆ 11–00 ಗಂಟೆಗೆ ಸಮಾವೇಶಗೊಳ್ಳುವುದು.

ಸದನವು ಸಂಜೆ 5 ಗಂಟೆ 44 ನಿಮಿಷಕ್ಕೆ ಮುಕ್ತಾಯವಾಗಿ ದಿನಾಂಕ 19–12–90 ರಂದು ಬುಧವಾರ ಮಧ್ಯಾಹ್ನ 11–00 ಗಂಟೆಗೆ ಸೇರಲು ನಿಶ್ಚಯಿಸಿತು.

(† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ತಮ್ಮ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)